೨) ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಸೇರಿ ೩೯೨ ಶಾಖೆಗಳಿವೆ.

೩) ಇಲ್ಲ. ಮಹಾರಾಷ್ಟ್ರ ರಿಜಿಸ್ಟ್ರಾರ್ ಆಫ್ ಕಂಪನೀಸ್‌ರವರಿಂದ ಕಂಪನೀಸ್ ಆಕ್ಟ್ ನಂ. ೨೮೭೬೧೧:೮೨ರಂತೆ ದಿನಾಂಕ ೨೪-೧೧-೮೨ರಂದು ರಿಜಿಸ್ಟರ್ ಆಗಿದೆ.

೪) ಸುಮಾರು ೧೬ ಕೋಟಿ ರೂ.

೫) ದೂರನ್ನು ದಾಖಲು ಮಾಡಿಕೊಂಡು ಸಿ.ಓ.ಡಿ.ಗೆ ತನಿಖೆಗಾಗಿ ವಹಿಸಲಾಗಿದೆ.

೬) ಇಲ್ಲ.

ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ಮಾಣದಲ್ಲಿ ಬಂದಿರುವ ತೊಂದರೆಯ ನಿವಾರಣೆಯ ಬಗ್ಗೆ

೭೭೬. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) —ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಕಣಗಲದಲ್ಲಿ ಆರೋಗ್ಯ ಕೇಂದ್ರವನ್ನು ನಿರ್ಮಿಸಲು ಉದ್ದೇಶಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಸದರಿ ಆರೋಗ್ಯ ಕೇಂದ್ರದ ಕಟ್ಟಡಕ್ಕೆ ಜಮೀನು ಸ್ವಾಧೀನಪಡಿಸಿಕೊಳ್ಳುವಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು?

ಇ) ಸದರಿ ಕಟ್ಟಡದ ನಿರ್ಮಾಣಕ್ಕಾಗಿ ಮಂಜೂರಾತಿಗಳ ನಿಧಿಯಿಂದ ಅಥವಾ ಜಿಲ್ಲಾ ಪರಿಷತ್ ನಿಧಿಯಿಂದ ಹಣ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿ, ಕರ್ನಾಟಕ ಕಲ್ಯಾಣ ಮಂತ್ರಿಗಳು).—

ಅ) ಹೌದು

ಆ) ಸ್ಥಳೀಯ ಪಂಚಾಯಿತಿಯವರು ಭೂ ಸ್ವಾಧೀನ ಹಣವನ್ನು ಪೂರ್ಣ ತುಂಬದೇ ಇರುವುದರಿಂದ ವಿಳಂಬವಾಗುತ್ತಿದೆ.

ಇ) ಪ್ರಸಕ್ತ (೧೯೮೭-೮೮)ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪರಿಷತ್ತಿನ ವತಿಯಿಂದ ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡ ಕೆಲಸಗಳಿಗೆ ರೂ.೮.೮೦ ಲಕ್ಷಗಳ ಒಟ್ಟು ಅನುದಾನ ವಿದ್ದು ಈ ಪ್ರಾಥಮಿಕ ಆರೋಗ್ಯಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ಇದರಿಂದ ಹಣವನ್ನು ಉಪಯೋಗಿಸಬಹುದು.

ಖಾಸಗಿ ಬಸ್ ಸಂಚಾರದ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ

೧೯೧. (ಬಿ). ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ರಾಜ್ಯದಲ್ಲಿರುವ ಖಾಸಗಿ ಬಸ್ ಸಂಚಾರದ ಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವ ಯೋಜನೆ ಸರ್ಕಾರದ ಮುಂದಿದೆಯೇ ?

೨ ಹಾಗಿದ್ದಲ್ಲಿ ಈ ಮಾರ್ಗಗಳ ಸಂಪೂರ್ಣ ರಾಷ್ಟ್ರೀಕರಣ ಯಾವಾಗ ಪೂರ್ಣವಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

೧ ಹೌದು.

೨ ಪ್ರಯಾಣಿಕರ ಸೇವೆಯನ್ನು ಹಣಕಾಸು ಮತ್ತು ಮೂಲ ಸಂಪತ್ತು ಹಾಗೂ ಸೌಲಭ್ಯಗಳ ಲಭ್ಯತೆಯನ್ನು ಅವಲಂಬಿಸಿ ಹಂತ ಹಂತವಾಗಿ ರಾಷ್ಟ್ರೀಕರಣ ಮಾಡಲಾಗುತ್ತಿದೆ.